ಆ) ಹಾಗಿದ್ದಲ್ಲಿ, ಈ ರಸ್ತೆಗಳ ದುರಸ್ತಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ಹಾಗೂ ಈ ದುರಸ್ತಿಗೆ ಕಾಲಮಿತಿಯನ್ನೇನಾದರೂ ಹಾಕಿಕೊಳ್ಳಲಾಗಿದೆಯೇ ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಹೌದು

ಆ) ಸರ್ಕಾರದ ನೂತನ ಕೈಗಾರಿಕಾ ನೀತಿ 2006–2011ರನ್ವಯ ಅಂತರಸನಹಳ್ಳಿ ಮೊದಲನೇ ಮತ್ತು ಎರಡನೇ ಹಂತಗಳಲ್ಲಿ ರಸ್ತೆಗಳನ್ನು ಮೇಲ್ದರ್ಜೆಗೇರಿಸುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಪ್ರಕ್ರಿಯೆಯು ಪ್ರಾರಂಭಗೊಂಡಿದ್ದು, ಅದರ ವಿವರ ಈ ಕೆಳಕಂಡಂತಿದೆ

ಕ್ರ ಸಂ	ಕೈಗಾರಿಕಾ ಪ್ರದೇಶದ ಹೆಸರು	ಕೈಗೊಂಡ ಕ್ರಮ
1	ಅಂತರಸನಹಳ್ಳಿ ಮೊದಲನೇ ಹಂತ	ಈ ಕೈಗಾರಿಕಾ ಪ್ರದೇಶದಲ್ಲಿ ರೂ 134 00 ಲಕ್ಷಗಳ ಅಂದಾಜು ವೆಚ್ಚದಲ್ಲಿ ರಸ್ತೆಗಳನ್ನು ಮೇಲ್ದರ್ಜೆಗೇರಿಸುವ ಸಂಬಂಧ ಟೆಂಡರ್‌ಗಳನ್ನು ಕರೆಯಲಾಗಿದ್ದು, ಈ ಟೆಂಡರ್‌ಗಳ ಅನುಮೋದನೆಯು ಅಂತಿಮ ಹಂತದಲ್ಲಿರುತ್ತದೆ ಈ ಕಾಮಗಾರಿಯು 2007ರ ಮೇ ತಿಂಗಳ ಒಳಗೆ ಮುಗಿಯುವ ನಿರೀಕ್ಷೆಯಿದೆ
2	ಅಂತರಸನಹಳ್ಳಿ 2ನೇ ಹಂತ	ಈ ಕೈಗಾರಿಕಾ ಪ್ರದೇಶದಲ್ಲಿ ರೂ 265 00 ಲಕ್ಷಗಳ ಅಂದಾಜು ವೆಚ್ಚದಲ್ಲಿ ರಸ್ತೆಗಳನ್ನು ಮೇಲ್ದರ್ಜೆಗೇರಿಸುವ ಸಂಬಂಧ ಟೆಂಡರ್‌ಗಳನ್ನು ಕರೆಯಲಾಗಿದೆ ಈ ಕಾಮಗಾರಿಯು 2007ರ ಮೇ ತಿಂಗಳ ಒಳಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ

763 (1150) ಶ್ರೀ ಲಾಲಾಜಿ ಆರ್ ಮೆಂಡನ್ (ಕಾಮ) ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಷ್ಣಸ್ಥಾವರಗಳು ಉಗುಳುವ ಹೊಗೆ ಮಿಶ್ರಿತ ಧೂಳಿನಿಂದ ಪರಿಸರದ ಮೇಲೆ ಆಮ್ಲ ಮಳೆಯಿಂದಾಗುವ ದುಷ್ಪರಿಣಾಮಗಳಿರುವ ಪರಿಹಾರ ಮಾರ್ಗ ಯಾವುದು ,

ಆ) ಪ್ರಾಣಿ ಸಂಕುಲಕ್ಕೆ ಮಾರಕವಾಗಿರುವ ಇದರ ನಿಯಂತ್ರಣಕ್ಕೆ ಸರ್ಕಾರ ಯಾವ ರೀತಿಯ ಕ್ರಮ ಕೈಗೊಳ್ಳುವುದು ?

ಶ್ರೀ ಸಿ ಚನ್ನಿಗಪ್ಪ (ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು)

ಅ) ಶಾಖೋತ್ಪನ್ನ ವಿದ್ಯುತ್ ಸ್ಥಾವರ ಹೊಗೆಯಲ್ಲಿನ ಧೂಳಿನಿಂದ ಆಮ್ಲ ಮಳೆಯಾಗುವುದಿಲ್ಲ ಆದರೆ ಹೊಗೆಯಲ್ಲಿನ ಗಂಧಕದ ಡೈಆಕ್ಸೈಡ್ (SO2) ಪ್ರಮಾಣವು ಹೆಚ್ಚಾದಾಗ, ಇದು ಹವಾಮಾನದಲ್ಲಿರುವ ತೇವಾಂಶದೊಂದಿಗೆ ಬೆರೆತು ಆಮ್ಲ ಮಳೆಗೆ ಕಾರಣವಾಗುತ್ತದೆ

ಹೊಗೆಯಲ್ಲಿ ಗಂಧಕದ ಡೈಆಕ್ಸೈಡನ್ನು ನಿಯಂತ್ರಿಸಲು ಕಡಿಮೆ ಗಂಧಕ ಅಂಶವುಳ್ಳ ಉರವಲು ಉಪಯೋಗಿಸುವುದರಿಂದ ಅಥವಾ flue gas desulphurisation ಘಟಕ ಸ್ಥಾಪಿಸಿ ಗಂಧಕವನ್ನು ಹಿಂಪಡೆಯುವುದರಿಂದ (Recovery) ಅಥವಾ ನಿಗದಿಪಡಿಸಿದ ಎತ್ತರದ ಚಿಮಣಿ ಅಳವಡಿಸುವುದು, ಇಂತಹ ಕ್ರಮಗಳನ್ನು ಕೈಗೊಂಡರೆ ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳ ಹೊಗೆಯಿಂದ ಉಂಟಾಗುವ ಆಮ್ಲ ಮಳೆಯನ್ನು ತಡೆಗಟ್ಟಬಹುದಾಗಿದೆ

ಆ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ರಾಜ್ಯದಲ್ಲಿನ ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳಿಗೆ ಹೊಗೆಯಲ್ಲಿನ ಮಾಲಿನ್ಯ ಕಾರಕಗಳನ್ನು ನಿಯಂತ್ರಿಸಲು ಕೆಳಕಂಡ ನಿಬಂಧನೆಗಳನ್ನು ಒಳಗೊಂಡಂತೆ ಸಮ್ಮತಿ ಪತ್ರ ನೀಡಿದ್ದು, ಇದನ್ನು ಅನುಷ್ಠಾನಗೊಳಿಸಲಾಗುತ್ತಿದೆ

1 ಶೇ 0 4% ಗಿಂತ ಕಡಿಮೆ ಸಲ್ಫರ್ ಮತ್ತು 15% ಬೂದಿ ಇರುವಂತಹ ಕಲ್ಲಿದ್ದಲು ಬಳಸುವುದು

2 ಹೊಗೆಯಲ್ಲಿನ ಗಂಧಕದ ಡೈ ಆಕ್ಸೈಡ್ ಕಡಿಮೆ ಮಾಡಲು ಪ್ರಾರಂಭ ಸಮಯ ಮತ್ತು flare stabilization ಸಮಯದಲ್ಲಿ ಕಡಿಮೆ ಸಲ್ಫರ್ ಇರುವ ಕಲ್ಲಿದ್ದಲು ಬಳಸುವುದು

3 ಸಸ್ಪೆಂಡೆಡ್ ಘಾರ್ಟಿಕ್ಯುಲೇಟ್ ಮ್ಯಾಟರ್ ಅನ್ನು ನಿಯಂತ್ರಿಸಲು ಎಲೆಕ್ಟ್ರೋಸ್ಟಾಟಿಕ್ ಪ್ರಿಸಿಪಿಟೇಟರ್ ಅಳವಡಿಸುವುದು ಮತ್ತು ಬಾಯ್ಲರ್‌ಗಳಿಗೆ ಅಗತ್ಯವಾದ ಚಿಮಣಿಯನ್ನು ಅಳವಡಿಸುವುದು

764 (666) ಡಾ ಮಹಾದೇವಪ್ಪ ಹೆಚ್ ಸಿ (ಟಿ ನರಸೀಪುರ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಲೆನಾಡು ಪ್ರದೇಶಗಳಲ್ಲಿ ದೊಡ್ಡ ದೊಡ್ಡ ಕಾಫಿ ಪ್ಲಾಂಟರುಗಳು ಸಾವಿರಾರು ಎಕರೆ ಸರ್ಕಾರಿ ಜಮೀನನ್ನು ಒತ್ತುವರಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಹಾಗಿದ್ದಲ್ಲಿ, ಒತ್ತುವರಿ ಮಾಡಿರುವ ವಿಸ್ತೀರ್ಣವೆಷ್ಟು , (ಒತ್ತುವರಿದಾರರುಗಳ ಹೆಸರು, ವಿಳಾಸ ಮತ್ತು ಒತ್ತುವರಿ ಮಾಡಿರುವ ವಿಸ್ತೀರ್ಣದ ವಿವರ ನೀಡುವುದು) ?